ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:17.04.2017 ರಂದು ನಡೆದ ಸಭೆಯ ನಡವಳಿಗಳು.

ವಿಷಯದ ಸಂಖ್ಯೆ: ಸಾಆಸ್ಥಾಸ/03/2016–17:

ಜಂಟಿ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ)ರವರ ದಿನಾಂಕ:28.03.2017ರ ಟಿಪ್ಪಣಿಯಲ್ಲಿ ಮಿಟ್ಟಗಾನಹಳ್ಳಿ ಹಾಗೂ ಬಾಗಲೂರು ಭೂಭರ್ತಿ ಘಟಕಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ 2015–16ನೇ ಸಾಲಿನ 14ನೇ ಹಣಕಾಸು ಆಯೋಗದ ಅನುದಾನದಲ್ಲಿ ಬೆಳ್ಳಹಳ್ಳಿ ಭೂಭರ್ತಿ ಘಟಕದ ಕಾಮಗಾರಿಗಳನ್ನು ಕೈಗೆತ್ತಿಕೊಂಡು ನಿರ್ವಹಿಸಲಾಗುತ್ತಿದೆ. ಪ್ರತಿನಿತ್ಯ ಪಾಲಿಕೆಯ ಪಶ್ಚಿಮ ವಲಯ, ಪೂರ್ವ ವಲಯ, ಯಲಹಂಕ ವಲಯ ಹಾಗೂ ದಕ್ಷಿಣ ವಲಯದ ಸುಮಾರು 200–220 ಕಾಂಪ್ಯಾಕ್ಟರ್ ಲೋಡ್‌ಗಳನ್ನು ಮಿಶ್ರತ್ಯಾಜ್ಯವನ್ನು ಸ್ವೀಕರಿಸಿ ಭೂಭರ್ತಿ ಮಾಡಲಾಗುತ್ತಿದೆ.

ಯಲಹಂಕ ವಲಯ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಮಿಟ್ಟಗಾನಹಳ್ಳಿ ಹಾಗೂ ಬೆಳ್ಳಹಳ್ಳಿಯ ಗ್ರಾಮಸ್ಥರು ಮತ್ತು ಕಣ್ಣೂರು ಗ್ರಾಮ ಪಂಚಾಯಿತಿಯ ಸದಸ್ಯರುಗಳು ಸದರಿ ಘಟಕಗಳ ಕಾರಣದಿಂದಾಗಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಾಸನೆ, ನೊಣ ಮತ್ತು ಸೊಳ್ಳೆಗಳ ಹಾವಳಿ ಉಂಟಾಗಿರುವುದರಿಂದ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಕುಡಿಯುವ ನೀರು, ಉತ್ತಮ ರಸ್ತೆ ಹಾಗೂ ಚರಂಡಿಗಳು ಇಲ್ಲದಿರುವುದರಿಂದ ಪಾಲಿಕೆಯ ವತಿಯಿಂದ ಸದರಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲು ಪಾಲಿಕೆ ವಾರ್ಡ್ ನಂ. 05ರ ಸದಸ್ಯರಾದ ಶ್ರೀ. ಕೆ.ಎ. ಮುನೀಂದ್ರಕುಮಾರ್ ರವರು ಕೋರಿದ್ದು, ಹಾಗೂ ಸದರಿಯವರು ದಿನಾಂಕ: 16.03.2017ರಂದು ಮಾನ್ಯ ಆಯುಕ್ತರಿಗೆ ಪತ್ರವನ್ನು ನೀಡಿ, ಸತತ 2 ವರ್ಷಗಳಿಂದ ಸರಿಯಾದ ಪ್ರಮಾಣದಲ್ಲಿ ಮಳೆ ಇಲ್ಲದ ಕಾರಣ ವಾರ್ಡ್ ಸಂಖ್ಯೆ 05ರ ವ್ಯಾಪ್ತಿಯಲ್ಲಿ ಇರುವ ಬೋರ್‌ವೆಲ್‌ಗಳು ಬತ್ತಿಹೋಗಿದ್ದು ನೀರಿಗೆ ಹಾಹಾಕಾರಉಂಟಾಗಿರುವುದರಿಂದ ಬೇಸಿಗೆಯ 3 ತಿಂಗಳ ಅವಧಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರಿನ ಸರಬರಾಜು ಮಾಡಲು ಹಾಗೂ ಹೊಸ ಬೋರ್‌ವೆಲ್‌ಗಳನ್ನು ಕೊರೆಸಲು ವಾರ್ಡ್ ವ್ಯಾಪ್ತಿಗೆ ರೂ. 100.00 ಲಕ್ಷಗಳ ವಿಶೇಷ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುವ ಮೇರೆಗೆ ಈ ಕೆಳಕಂಡಂತೆ ಲೆಕ್ಕಶೀರ್ಷಿಕೆ ಪಿ–3112 ರಡಿ ಸ್ವಚ್ಛ ಭಾರತ್ ಅಭಿಯಾನದಡಿಯಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ.

Sl. No.	Name of work	Est Cost (in lakhs)
1.	Supply of water through water tanker to Kattigenahalli, Bellahalli, Thirmenahalli, Chokkanahalli, Palanahalli, Agrahara Layout, Agrahara, Kogilu, Kogilu layout, Thirumenahalli, Sampigehalli and surrounding areas and drilling of borewells in ward No. 05, Bytarayanapura sub division.	100.00

ಕಂಡಿಕೆ (19)ರ ಮಾನ್ಯ ಆಯುಕ್ತರವರು ಆದೇಶಿಸಿರುವಂತೆ ಸಾರ್ವಜನಿಕ ಸೇವಾ ಹಾಗೂ ಆರೋಗ್ಯದ ಹಿತದೃಷ್ಟಿಯಿಂದ ಬೆಳ್ಳಹಳ್ಳಿ, ಮಿಟ್ಟಗಾನಹಳ್ಳಿ ಹಾಗೂ ಬಾಗಲೂರು ಸುತ್ತಮುತ್ತಲಿನ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರಿನ ಸರಬರಾಜು ಮಾಡಲು ಹಾಗೂ ಬೋರ್‌ವೆಲ್‌ಗಳನ್ನು ಕೊರೆಸಲು ವಾರ್ಡ್ ನಂ. 05ರ ವ್ಯಾಪ್ತಿಗೆ ರೂ. 100.00 ಲಕ್ಷಗಳ ವಿಶೇಷ ಅನುದಾನವನ್ನು 2016–17ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–3112 ರಡಿ ಸ್ವಚ್ಛ ಭಾರತ್ ಅಭಿಯಾನದಡಿಯಲ್ಲಿ ಅನುದಾನವನ್ನು ಒದಗಿಸಲಾಗಿದೆ.

ಈ ಕಾಮಗಾರಿಯನ್ನು ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಆಡಳಿತಾತ್ಮಕ ಅನುಮೋದನೆ ಹಾಗೂ ಮೇ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಲು ಅನುಮೋದನೆ ಕೋರಿ ಆಯುಕ್ತರವರ ಅವಗಾಹನೆಗೆ ಮಂಡಿಸಿದೆ.

ನಿರ್ಣಯ: ದಿನಾಂಕ: 17.04.2017 ರ ಸಭೆಯಲ್ಲಿ ಮುಂದೂಡಿದೆ
ದಿನಾಂಕ: 16.05.2017ರಂದು ನಡೆದ ಸಭೆಯು ನಡವಳಿ
ನಿರ್ಣಯ :- ದಿನಾಂಕ. 28.03.2017ರ ಜಂಟಿ ಆಯುಕ್ತರು (ಪಶ್ಚಿಮ ಮತ್ತು ಪೂ.ಸ್ಥಾ.ನಿ) ರವರ ಟಿಪ್ಪಣಿಯನ್ನು ಮುಂದುವರಿಸಲು ತೀರ್ಮಾನಿಸಿದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಕ್ರಮ ಸಂಖ್ಯೆ	ಹೆಸರು	ಪದನಾಮ	ಸಹಿ
1.	ಆನಂದ್‌ಕುಮಾರ್ .ಎಸ್	ಅಧ್ಯಕ್ಷರು	
2.	ಶಶಿಕಲಾ.ಜಿ.ವಿ	ಸದಸ್ಯರು	
3.	ಕೆ.ಸೋಮಶೇಖರ್	ಸದಸ್ಯರು	—
4.	ಎ. ಕೋದಂಡರೆಡ್ಡಿ	ಸದಸ್ಯರು	

5.	ಜಯಲಕ್ಷ್ಮಮ್ಮ ಪಿಳ್ಳಪ್ಪ	ಸದಸ್ಯರು	–
6.	ವಿ.ವಿ.ಸತ್ಯನಾರಾಯಣ	ಸದಸ್ಯರು	
7.	ಆರ್.ರೂಪ	ಸದಸ್ಯರು	
8.	ಪಿ.ವಿ.ಮಂಜುನಾಥಬಾಬು	ಸದಸ್ಯರು	
9.	ಶಿಲ್ಪ ಅಭಿಲಾಷ್	ಸದಸ್ಯರು	
10.	ನೇತ್ರಾವತಿ ಕೃಷ್ಣೇಗೌಡ	ಸದಸ್ಯರು	
11.	ಕೆ.ದೇವ್‌ದಾಸ್	ಸದಸ್ಯರು	–